ಕೂಡಲೇ ಹೊಸದುರ್ಗ ತಾಲ್ಲೂಕಿನಲ್ಲಿ ವ್ಯಾಪಕ ರೀತಿಯಲ್ಲಿ ಪರಿಹಾರ ಕಾಮಗಾರಿಗಳು ನಡೆಯದಿದ್ದರೆ ದಾರುಣ ಪರಿಸ್ಥಿತಿ ವಿಕೋಪಕ್ಕೆ ಹೋಗಲಿದೆ. ಮೇವಿಲ್ಲ, ನೀರಿಲ್ಲ. ಬೆಳೆ ಇಲ್ಲ, ಜನರಿಗೆ ಕೆಲಸವಿಲ್ಲದ ಚಿತ್ರ ಬರದ ಉತ್ಕಟತೆಗೆ ಸಾಕ್ಷಿಯಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಹೊಸದುರ್ಗ ತಾಲ್ಲೂಕಿನ ಸುಮಾರು ೨೮ ಗ್ರಾಮಗಳಲ್ಲಿ ಬರಗಾಲವಿದೆ. ಈಗಾಗಲೇ ಚಿತ್ರದುರ್ಗ ಜಿಲ್ಲೆಗೆ ೫೯ ಲಕ್ಷ ರೂಪಾಯಿಗಳನ್ನು ಬೇರೆ ಬೇರೆ ಬರಗಾಲದ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಲಾಗಿದೆ. ವಿಶೇಷವಾಗಿ ಹೊಸದುರ್ಗ ತಾಲ್ಲೂಕಿಗೆ ಗಮನಹರಿಸುವಂತೆ ಜಿಲ್ಲಾಧಿಕಾರಿಗಳವರಿಗೆ ಜಿಲ್ಲಾ ಪರಿಷತ್‌ನ ಮುಖ್ಯ ಕಾರ್ಯದರ್ಶಿಗಳಿಗೆ ಬರೆದು ಕೂಡಲೇ ಅಲ್ಲಿ ಕೆಲಸ ತೆಗೆದುಕೊಳ್ಳಿಯೆಂದು ತಿಳಿಸುತ್ತೇನೆ. ಮಾಗು ವಹಾರಾಟ ಮಾಡಿದ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಮಾಹಿತಿ ನನ್ನಲ್ಲಿ ಇಲ್ಲ. ಅದರ ಬಗ್ಗೆ ವಿಚಾರ ಮಾಡುತ್ತೇನೆ

೨೧) ಬ್ರಹ್ಮಾವರದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವುದರ ಬಗ್ಗೆ

ಶ್ರೀ ಬಸವರಾಜ್.— ಸುಮಾರು ೧೫ ವರ್ಷಗಳ ಕೆಳಗೆ ದಕ್ಷಿಣ ಕನ್ನಡದ ಬ್ರಹ್ಮಾವರದಲ್ಲಿ ಸಹಕಾರಿ ರಂಗದಲ್ಲಿ ಸಕ್ಕರೆ ಕಾರ್ಖಾನೆಯೊಂದನ್ನು ಪ್ರಾರಂಭಿಸಬೇಕೆಂದು ಸರಕಾರ ಯೋಚಿಸಿದಾಗ ರೈತರೆಲ್ಲರೂ ಸಂತೋಷಪಟ್ಟರು. ಹೆಚ್ಚಾಗಿ ಬಡ ಹಾಗೂ ಚಿಕ್ಕ ರೈತರು ಮಾಜಿ ಗೇಣಿದಾರರೇ ಇರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಕಷ್ಟದಿಂದ ಬಾಲು ಸಂಗ್ರಹಿಸಬೇಕಾಗಿತ್ತು. ಅದಕ್ಕಾಗಿ ಸಹಕಾರಿ ಸಂಸ್ಥೆಗಳ ಮೂಲಕ, ಬ್ಯಾಂಕುಗಳ ಮೂಲಕ ಸಾಲಮಾಡಿ ಷೇರು ಪಡೆದುಕೊಳ್ಳಲಾಯಿತು. ಆದರೆ ಕಬ್ಬು ಅರೆಯಲು ಪ್ರಾರಂಭವಾದುದು ಕೇವಲ ಎರಡು ವರ್ಷಗಳ ಹಿಂದೆ. ಕಬ್ಬು ಕಾರ್ಖಾನೆಗೆ ಮಾರಿ ಬಂದ ಹಣದಿಂದ ಷೇರು ಸಾಲದ ಕಂತು ಕಟ್ಟದೆ ಬಾಕಿದಾರರಾದರು. ವರ್ಷದಿಂದ ವರ್ಷಕ್ಕೆ ಬಡ್ಡಿ, ಬಡ್ಡಿಯಮೇಲೆ ಬಡ್ಡಿ ಬೆಳೆದು ಸಕ್ಕರೆಯು ಸವಿ ಉಣ್ಣಬೇಕಾದ ಕಾಲದಲ್ಲಿ ಬಡ್ಡಿಯ ಜೀವವನ್ನು ಭಕ್ಷಿಸುವಂತಾಗಿದೆ. "ಇಂತಾದರೆ ನಾವು ಬದುಕುವುದೆಂತಯ್ಯ" ಎಂದು ರೈತರೆಲ್ಲ ಮಾನ್ಯ ವಿಕಾಂತಯ್ಯನವರಲ್ಲಿ ಗೋಳಿಡುವಂತಾಗಿದೆ. ಕಬ್ಬು ಅರೆಯುವ ಅವಧಿಯವರೆಗಿನ ಷೇರು ಸಾಲದ ಮೇಲಿನ ಬಡ್ಡಿಯನ್ನು ಮಾಫಿ ಮಾಡಿ ತನ್ಮೂಲಕ ಕಾರ್ಖಾನೆಗೆ ಕಬ್ಬುಬೆಳೆಯುವ ಕಾರ್ಯಕ್ಕೆ ರೈತರು ಆಕರ್ಷಿತರಾಗುವಂತೆ ಉತ್ತೇಜನ ನೀಡಬೇಕೆಂದು ಸರಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ವಿಕಾಂತಯ್ಯ.— ಸದರಿ ಸಕ್ಕರೆ ಕಾರ್ಖಾನೆಯಲ್ಲಿ ಷೇರು ತೊಡಗಿಸಲು ಸದಸ್ಯರು ಮಾಡಿದಂಥ ಸಾಲಕ್ಕೆ ಸಂಬಂಧಿಸಿದಂತೆ ಸಹ ಆಲ್ಲಿ ಜಾರಿಯಲ್ಲಿರುವ ಸರ್ಕಾರಿ ಆಜ್ಞೆಗೆ ಅನುಸಾರವಾಗಿ ಸಕಾಲದಲ್ಲಿ ಸಾಲ ಪಾವತಿ ಮಾಡುವವರಿಗೆ ಬಡ್ಡಿ ರಿಯಾಯ್ತಿ ದೊರಕಿಸಿ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಅಧ್ಯಕ್ಷರು.— ಈಗ ಗಮನ ಸೆಳೆಯುವ ಸೂಚನೆ. ಮಾನ್ಯ ಗುರುಪ್ರಸಾದ್‌ರವರೇ ನೀವು ಸರ್ಕಾರದ ಗಮನ ಸೆಳೆಯಿರಿ.

ಶ್ರೀ ರಮಾನಾಥ ರೈ.— ನನ್ನದು ತಿಳಿಸಿರ ವಿಷಯ ಇದೆ.

ಅಧ್ಯಕ್ಷರು.— ನಾನು ಕರೆದಾಗ ನೀವು ಗೈರುಹಾಜರಿದ್ದೀರಿ. ನಾನು ಇಲ್ಲಿ ಮಾರ್ಕ್ ಮಾಡಿದ್ದೇನೆ. ಶ್ರೀ ಬಸವರಾಜ್ ಅವರು ತಡವಾಗಿ ಬಂದವರು ತಮಗೆ ಅವಕಾಶ ಕೊಡಿ ಎಂದು ಕೇಳಿದರು. ನಾನು ಅವಕಾಶ ಕೊಟ್ಟಿದ್ದೇನೆ. ಸರಿ, ಹೇಳಿ.

೨೨) ಬಂಟ್ವಾಳ ತಾಲ್ಲೂಕಿನಲ್ಲಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘವನ್ನು ನಿರ್ಮಿಸುವುದರ ಬಗ್ಗೆ

ಶ್ರೀ ರಮಾನಾಥ ರೈ —ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ತಾಲ್ಲೂಕಿನಲ್ಲಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘ ಸ್ಥಾಪಿಸಲು ಸರಕಾರ ನಿರ್ಧರಿಸಿತ್ತು. ಕೆಲವು ವರ್ಷಗಳ ಪ್ರಯತ್ನದ ಫಲವಾಗಿ ಸಹಸ್ರಾರು ಮಂದಿ ಸದಸ್ಯರಾದರು. ಸುಮಾರು ರೂ. ೩೦,೦೦೦ಕ್ಕೂ ಹೆಚ್ಚು ಪಾಲು ಬಂಡವಾಳ

ಸಂಗ್ರಹವಾಯಿತು. ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರಂವ ಆಡಳಿತ ಮಂಡಳಿಯೂ ನೇಮಿಸಲ್ಪಟ್ಟಿತು. ಇಷ್ಟಾದರೂ ಸಂಘ ಕೆಲಸ ಮಾಡುತ್ತಿಲ್ಲ. ಈ ಸಲುವಾಗಿ ರಾಜ್ಯ ಸರಕಾರ ಯಾಕೆ ಅನುಮತಿ ನೀಡಲಿಲ್ಲ? ಪಾಲು ಬಂಡವಾಳ ಸಂಗ್ರಹಿಸಿ ಸಂಘ ಸ್ಥಾಪಿಸಿಯೂ ನಡೆಸದೆ ಇರುವುದಂ ಬಡ ಬಳಕೆದಾರರ ಮೇಲೆ ಮಾಡುವ ದ್ರೋಹವಾಗಿದ್ದು, ಇನ್ನಾದರೂ ಸರಕಾರ ಅನುಮತಿ ನೀಡಿ, ಈ ಸಂಘ ಕಾರ್ಯಾರಂಭವನ್ನು ಕೂಡಲೇ ಮಾಡುವಂತೆ ನೋಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.--ಸದರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘ ಕಾರ್ಯಾರಂಭ ಮಾಡಲು ಸರ್ಕಾರದ ಅನುಮತಿ ಅಗತ್ಯವಿದ್ದರೆ ಈ ಬಗ್ಗೆ ತೀವ್ರವಾಗಿ ಪರಿತೀಲಿಸಿ ಸೂಕ್ತ ಸೂಚನೆ ನಿಡಲು ಪರಿಶೀಲಿಸುತ್ತೇನೆ.

ಅಧ್ಯಕ್ಷರು.--ಗವಂನ ಸೆಳೆಯಂವ ಸೂಚನೆ.....

ಶ್ರೀ ಸಿ. ಬೈರೇಗೌಡ.---ಸಿಸಿಳರಲ್ಲಿ ಮಾತನಾಡಲು ನನಗೆ ಇವತ್ತು ಅವಕಾಶ ಕೊಡುತ್ತೇನೆ ಎಂದು ತಾವು ಹೇಳಿದ್ದಿರಿ.

ಅಧ್ಯಕ್ಷರು.--ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ.---ನಾನು ಮೊನ್ನೆ ದಿವಸ...

ಅಧ್ಯಕ್ಷರು.---ಇನ್ನೂ ಟೈಮ್ ಇದೆಯಲ್ಲಾ. ಇವತ್ತು ಇದೆ, ನಾಳೆ ಇದೆ.

ಶ್ರೀ ಸಿ. ಬೈರೇಗೌಡ.---ನೀವು ಇವತ್ತು ಅಥವಾ ನಾಳೆ ಎಂದು ಹೇಳಿಬಿಟ್ಟರೆ ಆಯಿತು.

ಅಧ್ಯಕ್ಷರು.--- ನೀವು ಕೂಡಿರಿ. ನೀವು ನನಗೆ ಫೋರ್ಸ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ.---ತಾವು ನಮ್ಮ ಹಕ್ಕಿನ ರಕ್ಷಣೆಗೆ ಬರಬೇಕಾಗುತ್ತದೆ.

ಅಧ್ಯಕ್ಷರು.---ಆಯಿತು ಕುಳಿತುಕೊಳ್ಳಿ. ಗೌಡರು ಯಾವಾಗಲೋ ಬರುವುದು. ಬಂದಮೇಲೆ ಇಲ್ಲಿ ಗದ್ದಲ ಮಾಡುವುದು. ಶ್ರೀ ಗಂಗಾಪ್ರಸಾದ್‌ರವರೇ ನೀವು ಮಾನ್ಯ ಮಂತ್ರಿಗಳ ಗಮನ ಸೆಳೆಯಿರಿ

ಅಧ್ಯಕ್ಷರು.---ಈಗ ಶಾಸನ ರಚನೆ. ವಿಧೇಯಕವನ್ನು ಮಂಡಿಸುವುದಂ.

ಶಾಸನ ರಚನಾ ಕಾರ್ಯಕಲಾಪಗಳು

೧೯೮೭ನೇ ಇಸವಿಯ ಕರ್ನಾಟಕ ಧನ ವಿನಿಯೋಗದ (ಸಂಖ್ಯೆ ೩) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).---ಮಾನ್ಯ ಅಧ್ಯಕ್ಷರೇ, ೧೯೮೭ರ ಕರ್ನಾಟಕ ಧನ ವಿನಿಯೋಗದ (ಸಂಖ್ಯೆ ೩) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.---ಪ್ರಸ್ತಾವ ಏನೆಂದರೆ,

'' ೧೯೮೭ರ ಕರ್ನಾಟಕ ಧನ ನಿನಿಯೋಗದ (ಸಂಖ್ಯೆ ೩) ವಿಧೇಯಂಕವನ್ನು ಮಂಡಿಸಲಂ ಅಸುಮತಿ ನೀಡುವುದು'.

ಪ್ರಸ್ತಾವ ಆಂಗೀಕರಿಸಲ್ಪಟ್ಟಿತು ಮಂತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ತು ಸಂಸದೀಯ ವ್ಯವಹಾರಗಳ ಸಚಿವರು).---ಮಾನ್ಯ ಅಧ್ಯಕ್ಷರೇ, ೧೯೮೭ರ ಕರ್ನಾಟಕ ಧನ ವಿನಿಯೋಗದ (ಸಂಖ್ಯೆ ೩) ವಿಧೇಯಂಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.---ವಿಧೇಯಂಕವನ್ನು ಮಂಡಿಸಲಾಯಿತು. *

---

* Annexure